


ಅವರೆಲ್ಲಾ ಮಂತ್ರ–ತಂತ್ರ ಬಲ್ಲ ಯಕ್ಷಿಣಿಯರು. ಯಾರಾದರೂ ಗಂಡಸರು ದಾರಿ ತಪ್ಪಿ ಶ್ರೀಲಂಕಾಕ್ಕೆ ಬಂದರೆ ಅವರಿಂದ ಗರ್ಭಿಣಿಯರಾಗುತ್ತಿದ್ದರು. ಗರ್ಭಿಣಿಯರಾದ ಮೇಲೆ ಅವರನ್ನು ಕೊಂದು ಹಾಕುತ್ತಿದ್ದರು. ಹೆಣ್ಣುಮಗು ಹುಟ್ಟಿದರೆ ಸಂಭ್ರಮದಿಂದ ಸಾಕಿ ಸಲಹುತ್ತಿದ್ದರು. ಗಂಡುಮಗು ಹುಟ್ಟಿದರೆ ಕತ್ತು ಹಿಚುಕಿ ಕೊಂದು ಹೂತು ಹಾಕುತ್ತಿದ್ದರು. ನಾವಿಕರು ಆ ದ್ವೀಪದ ಹೆಸರು ಕೇಳಿದರೆ ಕನಸಲ್ಲೂ ಬೆಚ್ಚಿ ಬೀಳುತ್ತಿದ್ದರು. ಆಗ ಇದ್ದದ್ದು ಹಾಯಿ ಹಡಗುಗಳು. ಯಕ್ಷಿಣಿಯರಿಂದ ಸಾವು ಎಂಬ ಹಣೆಬರಹದ ನಾವಿಕರು ದಾರಿ ತಪ್ಪಿ ಅಲ್ಲಿಗೆ ಹೋಗುತ್ತಿದ್ದರು. ಯಕ್ಷಿಣಿಯರಿಗೆ ಗರ್ಭದಾನ ಮಾಡಿ ಸಾವನ್ನಪ್ಪುತ್ತಿದ್ದರು."

"ಹಾಗಾದರೆ ಅಲ್ಲಿ ಗಂಡಸರು ಉಳಿಯಲೇ ಇಲ್ಲವೇ?"

"ಕೇಳಿ ಸ್ವಾಮಿ, ವಂಗದೇಶ ಕೇಳಿದ್ದೀರಲ್ಲಾ? ಅಲ್ಲೊಬ್ಬ ರಾಜನಿದ್ದ. ಅವನಿಗೆ ವಿಜಯಕುಮಾರನೆಂಬ ದೃಢಕಾಯದ ಶಕ್ತಿಶಾಲೀ ಪುತ್ರನಿದ್ದ. ಪುತ್ರನಿಗೆ ಅವನದೇ ಪ್ರಾಯದ ನೂರು ಮಂದಿ ದಾಂಡಿಗ ಸ್ನೇಹಿತರಿದ್ದರು. ರಾಜಕುಮಾರ ನಾಯಕನಾಗಿ ಆಡದ ಆಟವಿಲ್ಲ. ಮಾಡದ ಮಾಟ ಇಲ್ಲ. ಅವರು ಕೊನೆ ಕೊನೆಗೆ ಮನೆ ಮನೆಗಳಿಗೆ ನುಗ್ಗಿ ಮಾನಭಂಗ ಮಾಡತೊಡಗಿದರು. ಪ್ರಜೆಗಳು ದೂರು ತೆಗೆದುಕೊಂಡು ಮಹಾರಾಜನಲ್ಲಿಗೆ ಬಂದರು. ಅವನು ಧರ್ಮಿಷ್ಠ. ಪ್ರಜೆಗಳ ದೂರು ಕೇಳಿ ಮಗ ವಿಜಯಕುಮಾರನನ್ನು, ನೂರು ಜನ ದಾಂಡಿಗರನ್ನು ಹಿಡಿದು ಸೆರೆಮನೆಗೆ ಹಾಕಿಸಿದ.

ಮುಂದಿನ ಅರಸನಾಗಬೇಕಿದ್ದ ವಿಜಯಕುಮಾರ ಕತ್ತಲ ಕೋಣೆಯಲ್ಲಿ ಕೊಳೆಯುವುದು